ವಿಷಯ.--(iv) ದಕ್ಷಿಣ ಕನ್ನಡ ಜಿಲ್ಲೆಯ 325 ಜನ ಸ್ವೈಫೆಂಡರಿ ಪದವೀಧರರನ್ನು ಖಾಯಂ ಮಾಡದಿರುವ ಬಗ್ಗೆ.

ಶ್ರೀ ಬಿ ಎಂ, ಇದಿನಬ್ಬ (ಉಳ್ಳಾಲ).--ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 325 ಜನ ಸ್ವೈಫೆಂಡರಿ ಪದವೀಧರರು ಕೆಲಸಮಾಡುತ್ತಿದ್ದಾರೆ. ಇವರನ್ನು ಖಾಯಂ ಮಾಡಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ-ಬೀಳುವ ಸ್ಥಳಗಳಿಗೆ ಇವರನ್ನು ಖಾಯಂ ಮಾಡಿ ಸೇರಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಈ ಕುರಿತು ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ನಗರಾಭಿವೃದ್ಧಿ ಸಚಿವರು).--ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ವಿಚಾರ ಗೊತ್ತಿದೆ. ಈಗಾಗಲೇ ಇದರ ಬಗ್ಗೆ ನಾವು ಪ್ರಯತ್ನವನ್ನು ತೆಗೆದುಕೊಂಡಿದ್ದೇವೆ. ನೇಮಕಾತಿ ಸಮಿತಿಗಳು ತಮ್ಮ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕೆಂದು ಆದೇಶ ಕೊಟ್ಟಿದ್ದೇವೆ.

ವಿಷಯ.--(v) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 6 ಜನ ಬಡ ದಲಿತ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿರುವ ಬಗ್ಗೆ.

ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).--ಮಾನ್ಯ ಅಧ್ಯಕ್ಷರೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 24-7-85ರಂದು ರಾತ್ರಿ 6 ಜನ ಬಡ ದಲಿತ ವಿದ್ಯಾರ್ಥಿಗಳಮೇಲೆ ಕಬ್ಬಿಣದ ಸಲಾಕೆ, ಚೈನು, ಚಾಕುಗಳಿಂದ ಸಜ್ಜಿತವಾದ ಕೆಲವು ಗೂಂಡಾಗಳು ಅಮಾನುಷವಾದ ಹಲ್ಲೆ ನಡೆಸಿಹ್ದಾರೆ. ಈ ಬಗ್ಗೆ ಸಂಬಂಧಪಟ್ಟ ಪೋಲೀಸ್ ಇಲಾಖೆಯವರು ಯಾವ ತರಹದ ಕ್ರಮವನ್ನೂ ಕೈಗೊಂಡಿಲ್ಲ. ಇದನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೋರಿ ಇದನ್ನು ಸದನದಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ಈ ವಿಶ್ವವಿದ್ಯಾನಿಲಯದ ಎರಡೂ ಕಡೆಯ ವಿದ್ಯಾರ್ಥಿಗಳು ನನ್ನ ಹತ್ತಿರ ಬಂದಿದ್ದರು. ಪೋಲೀಸ್ ಕಮಿಷನರ್‌ರವರನ್ನು ಕಳುಹಿಸಿ ಅಲ್ಲಿ ಸೂಕ್ತ ಬಂದೋಬಸ್ತು ಮಾಡಬೇಕೆಂದು ಹೇಳಿದಮೇಲೆ ಈಗ ಅಲ್ಲಿ ಸಾಕಷ್ಟು ಪೋಲಿಸ್ ಸಿಬ್ಬಂದಿಯನ್ನು ಹಾಕಿ ಇಪ್ಪತ್ತನಾಲ್ಕು ಗಂಟೆಕಾಲವೂ ಕೆಲಸಮಾಡಬೇಕೆಂದು ಹೇಳಿದ್ದೇನೆ.....

ಶ್ರಿ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು,—ಮತ್ತೆ ಇದರ ಮೇಲೆ ಮಾತನಾಡುವುದಕ್ಕೆ ಅವಕಾಶವೇ ಇಲ್ಲ. ಪ್ರತಿದಿನ ನಿಯಮ 334ರ ಪ್ರಕಾರ 10 ವಿಷಯಗಳನ್ನು ತೆಗೆದುಕೊಳ್ಳಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ, ಆದ್ದರಿಂದ ಇದರ ಬಗ್ಗೆ ಮತ್ತೆ ಕ್ಲಾರಿಫಿಕೇಷನ್ ಕೇಳುವ ಪ್ರಶ್ನೆಯೇ ಇಲ್ಲ. ತಾವೂ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದ್ದವರು. ತಮಗೆ ಎಲ್ಲ ವಿಚಾರವೂ ಗೊತ್ತಿದೆ.

ವಿಷಯ : (vi) ಹಾಸನದ ಡಿಪೋದಿಂದ ಸ್ಫೋಟಕ ವಸ್ತುಗಳು ಕಳುವಾಗಿರುವ ಬಗ್ಗೆ.

Sri M. Veerappa Moily,—80,000 detonators were reported to have been stolen from Top Security Government Depot in Ulikal village, Arkalgud taluk on 26-6-1985. The Asst. Ex. Engineer at Canal Sub dn., Dodda Maggee, reported the matter to the Konanur Police Station around 11 AM on 27-6-1985. According to him on 9-6-1985 some culprits had gained entry into the Irrigation Dept., buildings, located at Ulikal village by using false key. The matter was reported to the SP, Hassan and according to him, the investigation indicates that this is in all probability an inside job. The four watchmen who were on duty have admitted that they were all fast asleep. The Suptd. of Police reported to have said "the theft cannot be one man's job, and the collusion of higher officials is imperative."

Last year one of the Store-keeper's at Ulikal had alleged to have misappropriated 102 detonators and after the department en-